ಗ್ರಾಮಕ್ಕೆ ಬಂದಾಗ ಗ್ರಾಮಸ್ಥರ ಬೇಡಿಕೆಯನ್ನು ಕೇಳಿ ಗ್ರಾಮಸ್ಥರು ಪುಕ್ಕಟೆಯಾಗಿ ನಿವೇಶನ ನೀಡಿದರೆ ಬಸ್ಸು ನಿಲ್ದಾಣವನ್ನು ಕಟ್ಟುವ ಭರವಸೆಯನ್ನು ನೀಡಿದ್ದರು. ಹೊಂಬಳ ಗ್ರಾಮಪಂಚಾಯಿತಿಯು ಬಸ್ ನಿಲ್ದಾಣಕ್ಕೆ 1992 ನಿವೇಶನವನ್ನು ಕೆ.ಎಸ್.ಆರ್.ಟಿ.ಸಿ.ಗೆ ನೀಡಿತು. ನಿವೇಶನವು ಕೆ.ಎಸ್.ಆರ್.ಟಿ.ಸಿ.ಯ ಕಬ್ಜಾದಲ್ಲಿರುತ್ತದೆ. ಆದರೆ ಈವರೆಗೆ ಬಸ್ ನಿಲ್ದಾಣವಾಗಿಲ್ಲ. ಮಾನ್ಯ ಸಾರಿಗೆ ಸಚಿವರು ಸಂಬಂಧಿಸಿದ ಅಧಿಕಾರಿಗಳಿಗೆ ಆದೇಶ ನೀಡಿ ತೀವ್ರವಾಗಿ ಹೊಂಬಳ ಗ್ರಾಮದಲ್ಲಿ ಬಸ್ಸು ನಿಲ್ದಾಣ ನಿರ್ಮಾಣವಾಗುವಂತೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಕೋರುತ್ತೇನೆ.

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಮಂತ್ರಿ) : ಮಾನ್ಯ ಅಧ್ಯಕ್ಷರೇ, ಸರ್ಕಾರದ ಉತ್ತರ ಈ ಪ್ರಕಾರವಾಗಿ ಇರುತ್ತದೆ.

ಧಾರವಾಡ ಜಿಲ್ಲೆಯ ಗದಗ ತಾಲ್ಲೂಕಿನಲ್ಲಿ ಹೊಂಬಳವು ಹತ್ತು ಸಾವಿರ ಜನಸಂಖ್ಯೆಯನ್ನು ಹೊಂದಿರುವ ಒಂದು ದೊಡ್ಡ ಗ್ರಾಮವಾಗಿದೆ. ಸದರಿ ಗ್ರಾಮವು ಹೋಬಳಿ ಕೇಂದ್ರವಾಗಿರುವುದಲ್ಲದೆ ಮಂಡಲ ಪಂಚಾಯಿತಿ ಕೇಂದ್ರವೂ ಸಹ ಆಗಿರುತ್ತದೆ.

ಪ್ರಸ್ತುತ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ 33 ವಾಹನಗಳು ಈ ಗ್ರಾಮದ ಮೂಲಕ ಹಾದು ಹೋಗುತ್ತಿದೆ.

ಬಸ್ ನಿಲ್ದಾಣ ನಿರ್ಮಿಸುವ ಸಲುವಾಗಿ ಮಂಡಲ ಪಂಚಾಯಿತಿಯವರು ದಿನಾಂಕ 8-9-92 ರಂದು 100 x 65 ಅಡಿಗಳ ಅಳತೆಯುಳ್ಳ ನಿವೇಶನವನ್ನು ಉಚಿತವಾಗಿ ಮಂಜೂರು ಮಾಡಿರುತ್ತಾರೆ.

ಸಂಸ್ಥೆಯ ಆರ್ಥಿಕ ಮುಗ್ಗಟ್ಟಿನ ಪರಿಸ್ಥಿತಿಯ ಕಾರಣ ಬಸ್ ನಿಲ್ದಾಣ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಲಿಲ್ಲ. ಈ ವಿಷಯದ ಬಗ್ಗೆ 1996-97ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಲು ಪರಿಶೀಲಿಸಲಾಗುವುದು.

ಅಧ್ಯಕ್ಷರು : ಶ್ರೀ ರುಕ್ಮಯ್ಯ ಪೂಜಾರಿಯವರೇ, ತಾವು ಈಗ ಓದಿಬಿಡಿ. ಮಂತ್ರಿಗಳು ಇವತ್ತು ಬೆಳಿಗ್ಗೆ ಸ್ವಲ್ಪ ಕಾಲಾವಕಾಶ ಬೇಕು ಎಂದು ಕೇಳಿಕೊಂಡಿದ್ದಾರೆ. ಉತ್ತರವನ್ನು ನಾನು ತರಿಸಿಕೊಡುತ್ತೇನೆ. ತಾವು ಓದಿಬಿಡಿ.

**(vi) ಬಂಟ್ವಾಳ ಮತ್ತು ಪುತ್ತೂರು ತಾಲ್ಲೂಕಿನ ಭೂಮಿಯನ್ನು ಅರಣ್ಯ ಭೂಮಿಯೆಂದು ಘೋಷಿಸಿರುವ ಬಗ್ಗೆ**

ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಅಧ್ಯಕ್ಷರೇ, ಕರ್ನಾಟಕ ಸರ್ಕಾರದ ಅಧಿಸೂಚನೆ ಕ್ರಮಾಂಕ ಎಎಫ್‌ಡಿ 20 ಎಫ್‌ಯುಎಫ್ 69 ದಿನಾಂಕ 30.5.69ರ ಆದೇಶವು ದಿನಾಂಕ 12.6.69ರ ಕರ್ನಾಟಕ ರಾಜ್ಯಪತ್ರದ ಭಾಗ 4-2ಸಿ 11ರ ಪುಟಸಂಖ್ಯೆ 2051 ರಿಂದ 2072 ಪ್ರಕಟವಾದ ಮತ್ತು ಕರ್ನಾಟಕ ಸರ್ಕಾರದ ಅನುಬಂಧ ಕ್ರಮಾಂಕ ಎಎಫ್‌ಡಿ 41 ಡಬ್ಲೂಎಫ್ 77 ದಿನಾಂಕ 23-9-1977ರ ಆದೇಶವು ದಿನಾಂಕ 6.10.77ರ ಕರ್ನಾಟಕ ರಾಜ್ಯಪತ್ರದ ಭಾಗ 4-(2) ಸಿ 11ರ ಪುಟಸಂಖ್ಯೆ 960 ದಿನಾಂಕ 4-8-94ರಲ್ಲಿ ಪ್ರಕಟವಾದ ಮೇರೆಗೆ ಬಂಟ್ವಾಳ ಮತ್ತು ಪುತ್ತೂರು ತಾಲ್ಲೂಕಿನ ಭೂಮಿಯನ್ನು ಮೀಸಲು ಅರಣ್ಯವೆಂದು ಘೋಷಿಸಲು ನಿರ್ಧಾರವಾಗಿದೆ. ಈ ರೀತಿ ಅರಣ್ಯ ಭೂಮಿಯೆಂದು ಘೋಷಿಸಿರುವ ಜಮೀನನ್ನು ನೂರಾರು ವರ್ಷಗಳಿಂದ ಹಲವಾರು ಖಾಸಗಿ ವ್ಯಕ್ತಿಗಳು ಅನುಭೋಗ ಮಾಡಿಕೊಂಡು ಬರುತ್ತಿದ್ದಾರೆ. ಇದು ಅರಣ್ಯ ಭೂಮಿಯೆಂದು ಘೋಷಿಸಿದರೆ ಈ ಕುಟುಂಬಗಳು ದಾರಿಪಾಲಾಗುತ್ತವೆ. ಆದ್ದರಿಂದ ಇಂತಹ ಭೂಮಿಯನ್ನು ಅರಣ್ಯ ಭೂಮಿಯನ್ನಾಗಿ ಘೋಷಿಸಬಾರದಾಗಿ ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಅಧ್ಯಕ್ಷರು : ಉತ್ತರವನ್ನು ನಾನು ತರಿಸಿಕೊಡುತ್ತೇನೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಆಯಿತು.

**(vii) ಹಿರೇಕೆರೂರು ತಾಲ್ಲೂಕು ಅಬಲೂರಿನ ಅಭಿವೃದ್ಧಿ ಕಾರ್ಯಕ್ರಮಗಳು**

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಅಧ್ಯಕ್ಷರೇ, ವರಕವಿ ಸರ್ವಜ್ಞನ ಜನ್ಮಸ್ಥಳವಾದ ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಅಬಲೂರಿನಲ್ಲಿ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿತ್ತು. ಕೇವಲ ಅಬಲೂರು-ಹಿರೇಕೆರೂರು ಕೂಡುವ ರಸ್ತೆಯಲ್ಲಿ ಮೆಟಲಿಂಗ್ ಮಾಡುವ ಕೆಲಸ ನಡೆದಿದೆ. ಪ್ರವಾಸಿಮಂದಿರದ ಕಾರ್ಯ ಸುಮಾರು ಒಂದು ವರ್ಷದಿಂದ ಸ್ಥಗಿತಗೊಂಡಿದೆ. ಸ್ಮಾರಕಭವನದ ಕೆಲಸ ಇನ್ನೂ ಪ್ರಾರಂಭವೇ ಆಗಿಲ್ಲ. ಹಿರೇಕೆರೂರು-ಅಬಲೂರು ಕೂಡುವ ರಸ್ತೆಯ ಡಾಂಬರೀಕರಣ ಬಗ್ಗೆ ಯಾವುದೇ ಕ್ರಮ ಜರುಗಿಸಿಲ್ಲ. ಕಾರಣ, ಈಗಲಾದರೂ ವರಕವಿ ಸರ್ವಜ್ಞನ ಜನ್ಮಸ್ಥಳವಾದ ಅಬಲೂರಿನ ಅಭಿವೃದ್ಧಿಗೊಳಿಸಲು ಹಾಕಿಕೊಂಡ ಕಾರ್ಯಕ್ರಮಗಳನ್ನು ಬೇಗನೆ ಮಾಡಲು ಮಾನ್ಯ ಲೋಕೋಪಯೋಗಿ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಮಂತ್ರಿ) : ಮಾನ್ಯ ಅಧ್ಯಕ್ಷರೇ, ಸರ್ಕಾರದ ಹೇಳಿಕೆಯು ಈ ರೀತಿ ಇದೆ.

ವರಕವಿ ಸರ್ವಜ್ಞನ ಜನ್ಮಸ್ಥಳವಾದ ಧಾರವಾಡ ಜಿಲ್ಲೆ, ಹಿರೇಕೆರೂರು ತಾಲ್ಲೂಕಿನ ಅಬಲೂರಿನಲ್ಲಿ ಕೆಳಕಂಡ ಅಭಿವೃದ್ಧಿ ಕಾಮಗಾರಿಗಳನ್ನು ಮಾಡಲಾಗುತ್ತಿದೆ:

**1. ಹಿರೇಕೆರೂರ – ಅಬಲೂರ – ಕೂಡು ರಸ್ತೆ :**

ಈ ರಸ್ತೆಯ 6 ಕಿ.ಮೀ. ಗೆ ಜಲ್ಲಿ ಹಾಕಲಾಗಿದೆ. ಇನ್ನುಳಿದ 2 ಕಿ.ಮೀ.ಗೆ ಜಲ್ಲಿ ಹಾಕುವ ಕಾಮಗಾರಿಯು ಮುಂದುವರೆಯುತ್ತಿದೆ. ಈ ಕಾಮಗಾರಿಯನ್ನು ಒಟ್ಟು 10 ಲಕ್ಷ ರೂ.ಗಳ ಅಂದಾಜಿನಲ್ಲಿ ಕೈಗೊಳ್ಳಲಾಗಿದೆ. ಡಾಂಬರೀಕರಣವನ್ನು ಮಾಡುವ ಬಗ್ಗೆ ಪರಿಶೀಲಿಸಲಾಗುವುದು.

**2. ಸ್ಮಾರಕ ಭವನ :**

ಈ ಕಾಮಗಾರಿಯನ್ನು 2 ಲಕ್ಷ ರೂ.ಗಳ ಅಂದಾಜಿನಲ್ಲಿ ತೆಗೆದುಕೊಳ್ಳಲಾಗಿದೆ. ಈ ಕಾಮಗಾರಿಗೆ ಯಾರೂ ಗುತ್ತಿಗೆದಾರರು ಮುಂದೆ ಬರಲಿಲ್ಲ. ಆದ್ದರಿಂದ ನಿಯಮಗಳಂತೆ ಇಲಾಖಾ ವತಿಯಿಂದ ತೆಗೆದುಕೊಳ್ಳಲಾಗುತ್ತದೆ. ಹಾಗೂ ಈ ಸಾಲಿನಲ್ಲಿ ನಿಗದಿಪಡಿಸಿರುವ 1 ಲಕ್ಷ ರೂ.ಗಳ ಅನುದಾನವನ್ನು ಉಪಯೋಗಿಸಲಾಗುವುದು.

**3. ಪ್ರವಾಸಿ ಮಂದಿರ :**

ಈ ಕಾಮಗಾರಿಯನ್ನು 10 ಲಕ್ಷ ರೂ.ಗಳ ಅಂದಾಜಿನಲ್ಲಿ ಕೈಗೊಳ್ಳಲಾಗಿದೆ. ಇದಕ್ಕೂ ಸಹ ಗುತ್ತಿಗೆದಾರರು ಬರದಿದ್ದುದರಿಂದ ಕಾಮಗಾರಿಯನ್ನು ಇಲಾಖಾವತಿಯಿಂದ ಕೈಗೊಂಡಿದ್ದು ನೆಲಮಟ್ಟದವರೆಗೂ ಕಾಮಗಾರಿಯು ಆಗಿದೆ. ಈ ಸಾಲಿನಲ್ಲಿ ನಿಗದಿಪಡಿಸಿರುವ 5 ಲಕ್ಷ ರೂ. ಅನುದಾನವನ್ನು ಉಪಯೋಗಿಸಿಕೊಳ್ಳಲಾಗುವುದು.

**4. ಕಾಂಪೌಂಡ್ ಗೋಡೆ ನಿರ್ಮಾಣ :**

ಈ ಕಾಮಗಾರಿಯನ್ನು 2ಲಕ್ಷ ರೂ.ಗಳ ಅಂದಾಜಿನಲ್ಲಿ ಕೈಗೊಂಡಿದ್ದು ಕಾಮಗಾರಿಯು ಮುಂದುವರಿದಿದೆ. ಈ ಸಾಲಿನಲ್ಲಿ ನಿಗದಿಪಡಿಸಿದ 1 ಲಕ್ಷ ರೂ.ಗಳ ಅನುದಾನವನ್ನು ಉಪಯೋಗಿಸಿಕೊಳ್ಳಲಾಗುವುದು.